# ದೇವೀ ಆರಾತ್ರಿಕಮ್

**ಪ್ರವರಾತೀರ ನಿವಾಸಿನಿ ನಿಗಮ ಪ್ರತಿಪಾದ್ಯೇ**
**ಪಾರಾವಾರ ವಿಹಾರಿಣಿ ನಾರಾಯಣಿ ಹೃದ್ಯೇ ।**
**ಪ್ರಪಂಚಸಾರೇ ಜಗದಾಧಾರೇ ಶ್ರೀವಿದ್ಯೇ**
**ಪ್ರಸನ್ನಪಾಲನ-ನಿರತೇ ಮುನಿವೃಂದಾರಾಧ್ಯೇ ॥**

**ಜಯ ದೇವಿ ಜಯ ದೇವಿ ಜಯ ಮೋಹನರೂಪೇ**
**ಮಾಮಿಹ ಜನನಿ ಸಮುದ್ಧರ ಪತಿತಂ ಭವಕೂಪೇ ॥೧॥**

ಪ್ರವರಾ ನದೀತೀರವಾಸಿನಿ, ವೇದಗಳಿಂದ ಪ್ರತಿಪಾದಿತಳಾದವಳೆ, ಕ್ಷೀರಸಾಗರದಲ್ಲಿ ವಿಹರಿಸುವ ನಾರಾಯಣಸ್ವರೂಪಿಣಿಯೆ, ಸುಂದರಿ, ಪ್ರಪಂಚದ ಸಾರರೂಪಿಣಿ, ಜಗತ್ತಿಗೆ ಆಧಾರಳಾದ ಶ್ರೀವಿದ್ಯೆ, ಆಶ್ರಿತರನ್ನು ರಕ್ಷಿಸುವುದರಲ್ಲಿ ಸದಾ ತೊಡಗಿಸಿಕೊಂಡಿರುವವಳೆ, ಮುನಿಗಳ ಸಮೂಹದಿಂದ ಪೂಜಿತಳಾದ ದೇವಿ, ನಿನಗೆ ಜಯವಾಗಲಿ. ಮನಮೋಹಕ ರೂಪವುಳ್ಳ ತಾಯೆ! ಸಂಸಾರವೆಂಬ ಬಾವಿಯಲ್ಲಿ ಬಿದ್ದಿರುವ ನನ್ನನ್ನು ಉದ್ಧರಿಸು.

**ದಿವ್ಯಸುಧಾಕರ-ವದನೇ ಕುಂದೋಜ್ವಲ-ರದನೇ**
**ಪದನಖನಿರ್ಜಿತಮದನೇ ಮದುಕೈಟಭ-ಕದನೇ ।**
**ವಿಕಸಿತಪಂಕಜ-ನಯನೇ ಪನ್ನಗಪತಿ-ಶಯನೇ**
**ಖಗಪತಿವಹನೇ ಗಹನೇ ಸಂಕಟವನದಹನೇ ॥**
**॥ಜಯ ದೇವಿ ॥ ೨ ॥**

ಪೂರ್ಣಚಂದ್ರನಂತಹ ದಿವ್ಯವಾದ ಮುಖವುಳ್ಳ, ಕುಂದ ಪುಷ್ಪದಂತೆ ಹೊಳೆಯುವ ಹಲ್ಲುಗಳುಳ್ಳ, ಪಾದದ ಉಗುರಿನ ಕಾಂತಿಯಿಂದ ಮನ್ಮಥನನ್ನೂ ಪರಾಜಯಗೊಳಿಸಿದ ಜನನಿ, ಮಧು-ಕೈಟಭರನ್ನು ಸಂಹರಿಸಿದ, ಅರಳಿದ ಕಮಲದಂತಹ ಕಣ್ಣುಳ್ಳ, ಆದಿಶೇಷನ ಮೇಲೆ ಮಲಗಿರುವ, ಗರುಡನನ್ನು ವಾಹನವಾಗಿ ಉಳ್ಳ, ಗಂಭೀರಳಾಗಿರುವ, ದುಃಖ ಎಂಬ ವನವನ್ನು ಧ್ವಂಸ ಮಾಡುವ ದೇವಿ, ನಿನಗೆ ಜಯವಾಗಲಿ. ಸಂಸಾರವೆಂಬ ಬಾವಿಯಲ್ಲಿ ಬಿದ್ದಿರುವ ನನ್ನನ್ನು ಉದ್ಧರಿಸು.

**ಮಂಜೀರಾಂಕಿತಚರಣೇ ಮಣಿಮುಕ್ತಾಭರಣೇ**
**ಕಂಚುಕಿವಸ್ತ್ರಾವರಣೇ ವಕ್ತ್ರಾಂಬುಜಧರಣೇ ।**
**ಶಕ್ರಾಮಯಭಯಹರಣೇ ಭೂಸುರಸುಖಕರಣೇ**
**ಕರುಣಾಂ ಕುರು ಮೇ ಶರಣೇ ಗಜನಕ್ರೋದ್ಧರಣೇ ॥**
**॥ ಜಯ ದೇವಿ ॥ ೩ ॥**

ನೂಪುರಗಳನ್ನು ಧರಿಸಿದ ಪಾದಗಳುಳ್ಳ, ಮುತ್ತುರತ್ನಗಳ ಆಭರಣವನ್ನು ಧರಿಸಿರುವ, ಶ್ರೇಷ್ಠ ವಸ್ತ್ರಗಳನ್ನು ಹೊದ್ದುಕೊಂಡಿರುವ ಕಮಲದ ಮುಖದ ದೇವಿ, ಇಂದ್ರನಿಗೆ ಒದಗಿದ ಎಲ್ಲಾ



ಆಪತ್ತು ವಿಪತ್ತು, ಭಯಗಳನ್ನು ದೂರಮಾಡಿದವಳೆ, ಭೂಸುರರಿಗೆ ಸುಖವನ್ನುಂಟುಮಾಡುವ, ಆನೆ ಮೊಸಳೆಗಳನ್ನುದ್ಧರಿಸಿದ ಅಮ್ಮಾ, ಶರಣಾಗತನಾದ ನನ್ನಲ್ಲಿ ಕರುಣೆತೋರು. ದೇವಿ, ನಿನಗೆ ಜಯವಾಗಲಿ. ಸಂಸಾರವೆಂಬ ಬಾವಿಯಲ್ಲಿ ಬಿದ್ದಿರುವ ನನ್ನನ್ನು ಉದ್ಧರಿಸು.

**ಛಿತ್ವಾ ರಾಹುಗ್ರೀವಾಂ ಪಾಸಿ ತ್ವಂ ವಿಬುಧಾನ್**
**ದದಾಸಿ ಮೃತ್ಯುಮನಿಷ್ಟಂ ಪೀಯೂಷಂ ವಿಬುಧಾನ್ ।**
**ವಿಹರಸಿ ದಾನವ ಋದ್ಧಾನ್ ಸಮರೇ ಸಮಸಿದ್ಧಾನ್**
**ಮಧ್ವಮುನೀಶ್ವರ ವರದೇ ಪಾಲಯ ಸಂಸಿದ್ಧಾನ್ ॥**
**॥ ಜಯ ದೇವಿ ॥ ೪ ॥**

ರಾಹುವಿನ ತಲೆಯನ್ನು ಕತ್ತರಿಸಿ ದೇವತೆಗಳನ್ನು ರಕ್ಷಿಸಿದ, ದಾನವರಿಗೆ ಮರಣವನ್ನೂ ದೇವತೆಗಳಿಗೆ ಅಮೃತವನ್ನೂ ಕರುಣಿಸಿದ ದೇವಿ, ರಣರಂಗದಲ್ಲಿ ಬಲಮದದಿಂದ ಕೊಬ್ಬಿದ ದಾನವರೊಡನೆ ಕ್ರೀಡಿಸುವ, ಮಧ್ವಮುನಿಗೆ ವರವನ್ನು ದಯಪಾಲಿಸಿದ ಜನನಿ, ಸಿದ್ಧರನ್ನು ರಕ್ಷಿಸು, ಭವಕೂಪದಲ್ಲಿ ಬಿದ್ದಿರುವ ನನ್ನನ್ನು ಉದ್ಧರಿಸು.